JUNE 18,2024

ALL INDIA RADIO- DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ವಿವೇಕಾದಿತ್ಯ ಕನಿಯಾಲ

<><><>

ಮುಖ್ಯಾಂಶಗಳು:

<><><>

- ಪೆಟ್ರೋಲ್, ಡಿಸೇಲ್ ದರ ಏರಿಕೆ, ಅನಿವಾರ್ಯ – ಮುಖ್ಯಮಂತ್ರಿ ಸಮರ್ಥನೆ; ತೈಲ ದರ ಇಳಿಕೆಗೆ ಆಗ್ರಹಿಸಿ ಬಿಜೆಪಿಯಿಂದ, ರಾಜ್ಯಾದ್ಯಂತ ಪ್ರತಿಭಟನೆ.
- ಪ್ರಸಕ್ತ ಶೈಕ್ಷಣಿಕ ವರ್ಷದಿಂದ, ಸಾವಿರದ ನಾಲ್ಕನೂರಾ 19 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ದ್ವಿ ಭಾಷಾ ಬೋಧನೆಗೆ, ಒತ್ತು.
- ವೈದ್ಯಕೀಯ ವೃತ್ತಿ ನಿರತರೇ, ಹೆಣ್ಣು ಭ್ರೂಣ ಹತ್ಯೆಯಲ್ಲಿ ತೊಡಗಿರುವುದು, ಆಘಾತಕಾರಿ – ದಿನೇಶ ಗುಂಡೂರಾವ್, ಕಳವಳ.
- ರೈಲ್ವೆ ಇಲಾಖೆಯ, ರಾಜ್ಯದ ನಾಲ್ಕು ವಿಭಾಗಗಳ, ಒಂಬತ್ತು ಪ್ರಮುಖ ಯೋಜನೆಗಳು, ಶೀಘ್ರ ಜಾರಿಗೆ – ಕೇಂದ್ರ ಸಚಿವ ವಿ.ಸೋಮಣ್ಣ.

<><><>

ಈಗ ವಾರ್ತೆಗಳ ವಿವರ

ಪ್ರದೇಶ ಸಮಾಚಾರ
18.06.2024
ಪಿಎಂ/ಕಿಸಾನ್ ಸಮ್ಮಾನ್

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿ, 17ನೇ ಕಂತಿನ ಹಣವನ್ನು, 9 ಕೋಟಿ 26 ಲಕ್ಷ ರೈತರ ಖಾತೆಗಳಿಗೆ, ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಉತ್ತರ ಪ್ರದೇಶದ ವಾರಾಣಸಿಯಲ್ಲಿ, ಸಂಜೆ 4 ಗಂಟೆಗೆ ನೇರ ಜಮೆ ಮಾಡಲಿದ್ದಾರೆ.

ದೇಶಾದ್ಯಂತ 50 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಹಾಗೂ ಕರ್ನಾಟಕದಲ್ಲಿ, ಧಾರವಾಡ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ವಿಶ್ವವಿದ್ಯಾಲಯ ಧಾರವಾಡದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ಧಾರವಾಡಕ್ಕೆ ಭೇಟಿ ನೀಡಲಿರುವ, ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ, ಎಚ್. ಡಿ. ಕುಮಾರಸ್ವಾಮಿ, ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇದೇ ಸಂದರ್ಭದಲ್ಲಿ "ಅಗ್ರಿ ಸ್ಟ್ಯಾಕ್ ಮತ್ತು ಕೃಷಿ ಸಖಿ" ಹೊಸ ಯೋಜನೆಗಳಿಗೆ ಚಾಲನೆ ಸಿಗಲಿದೆ.

ದೇಶದ 12 ರಾಜ್ಯಗಳಲ್ಲಿ ಸಂಘಟಿಸಲಾದ 30 ಸಾವಿರ ಸ್ವ–ಸಹಾಯ ಗುಂಪುಗಳು, 70 ಸಾವಿರ ಕೃಷಿ ಸಖಿಯರನ್ನು, ಪರ್ಯಾಯ ವಿಸ್ತರಣಾ ಕಾರ್ಯಕರ್ತರು ಎಂದು ಘೋಷಿಸಿ, ಪ್ರಧಾನಮಂತ್ರಿ ಪ್ರಮಾಣ ಪತ್ರ ನೀಡಲಿದ್ದಾರೆ.

'ಲಖಪತಿ ದೀದಿ' ಮಹತ್ವಾಕಾಂಕ್ಷೆಯ ಯೋಜನೆ ಅಡಿ, ಕೃಷಿ ಸಖಿ ಮಹಿಳೆಯರು ಈಗಾಗಲೇ ರೈತರ ಪಾಠಶಾಲೆ, ಬೀಜ ಬ್ಯಾಂಕ್‌ಗಳ ಸ್ಥಾಪನೆ, ಮಣ್ಣು ಆರೋಗ್ಯ ಸಂರಕ್ಷಣೆ, ಸಮಗ್ರ ಬೆಳೆ ಪದ್ಧತಿ, ಹೈನುಗಾರಿಕೆ ಹಾಗೂ ನೈಸರ್ಗಿಕ ಕೃಷಿಯ ಬಗ್ಗೆ ತರಬೇತಿಗಳನ್ನು ಪಡೆದಿದ್ದಾರೆ.

ಹರ್ಷ/ಉಮೇಶ/ಧಾರವಾಡ ಕೃಷಿ ವಿವಿ ವಿ.ಪ್ರ./ಕ.ವಾ.ಇ.ಧಾ.

ಪ್ರದೇಶ ಸಮಾಚಾರ
18.06.2024
ಡ್ರೋಣ್ ದೀದಿ/ಕೌಶಲ ವಿಕಾಸ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ ರೈತ ಉತ್ಪಾದಕರ ಕಂಪೆನಿಗಳ ಸೃಜನೆ ಯೋಜನೆ ಅಡಿ, 8 ಸಾವಿರದ 6 ನೂರಾ 94 ಸಂಸ್ಥೆಗಳು ನೋಂದಣಿಯಾಗಿವೆ.

'ಡ್ರೋಣ್ ದೀದಿ' ಯೋಜನೆ ಅಡಿ, 14 ಸಾವಿರದ 500 ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ತರಬೇತಿ ನೀಡಿ, ಕಾರ್ಯಪ್ರವೃತ್ತರಾಗಲು ಸನ್ನದ್ಧಗೊಳಿಸಲಾಗಿದೆ.

ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ ಅಡಿ, ತರಬೇತಿ ಪಡೆದ, 17 ಸಾವಿರದ ಇನ್ನೂರ 94 ಜನ ಯುವ ಉದ್ಯಮಿಗಳು, ಕೃಷಿ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ದೇಶಾದ್ಯಂತ, ಈಗಾಗಲೇ 1 ಕೋಟಿ 40 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಕೇಂದ್ರ ಕೃಷಿ ಸಚಿವಾಲಯ, ರಾಜ್ಯದ ಕೃಷಿ ಮಂತ್ರಾಲಯಗಳೊಡನೆ ಸಮನ್ವಯ ಸಾಧಿಸಿ, ಈ ಯೋಜನೆಗಳನ್ನು ಸಂಘಟಿತವಾಗಿ ಅನುಷ್ಠಾನಗೊಳಿಸುತ್ತಿವೆ.

ಹರ್ಷ/ಉಮೇಶ/ಪಿಐಬಿ/ನ್ಯೂಸ್ ಆನ್ ಏರ್

ಪ್ರದೇಶ ಸಮಾಚಾರ
18.06.2024
ಸಿದ್ದು/ತೈಲ

ಪೆಟ್ರೋಲ್ ಹಾಗೂ ಡಿಸೇಲ್ ದರಗಳ ಏರಿಕೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅನಿವಾರ್ಯ ಎಂದು ವಿಶ್ಲೇಷಿಸಿದ್ದಾರೆ.

ಬೆಂಗಳೂರಿನ ಗೃಹ ಕಚೇರಿ ಕೃಷ್ಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜಾಗತಿಕವಾಗಿ ತೈಲ ಬೆಲೆ ಕಡಿಮೆ ಇದ್ದು, ಕೇಂದ್ರ ಸರ್ಕಾರದ ವಿರುದ್ಧ ಬಿಜೆಪಿ ನಾಯಕರು ಮೊದಲು ಪ್ರತಿಭಟನೆ ನಡೆಸಲಿ. ಬಿಜೆಪಿ ಆಡಳಿತವಿರುವ ರಾಜ್ಯಗಳಿಗಿಂತ ಕರ್ನಾಟಕ ರಾಜ್ಯದಲ್ಲೇ ತೈಲ ಬೆಲೆ ಕಡಿಮೆ ಇದೆ, ಎಂದರು.

ಆರ್ಥಿಕ ಮೂಲಗಳಾದ ಮದ್ಯ ಮತ್ತು ತೈಲದಿಂದ ಹೆಚ್ಚಿನ ಆದಾಯ ಬಂದರೆ, ರಾಜ್ಯದ ಅಭಿವೃದ್ಧಿ ಸಾಧ್ಯ. ಗ್ಯಾರಂಟಿ ಯೋಜನೆಗಳಿಗೆ ಹಣ ನೀಡಲು ತೈಲ ಬೆಲೆಗಳನ್ನು ಏರಿಸಿಲ್ಲ ಎಂದು, ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

<><><>

ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಾಗಬೇಕು; ಹಾಗಾಗಿ, ಅಭಿವೃದ್ಧಿಯ ದೃಷ್ಟಿಯಿಂದ, ಆರ್ಥಿಕ ಸಂಪನ್ಮೂಲ ಕ್ರೋಢೀಕರಣ ಅಗತ್ಯ ಎಂದು, ಗೃಹ ಖಾತೆ ಸಚಿವ ಡಾಕ್ಟರ್ ಜಿ.ಪರಮೇಶ್ವರ್, ಬೆಂಗಳೂರಿನಲ್ಲಿ ಹೇಳಿದ್ದಾರೆ.

<><><>

ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ದರ ಕಡಿಮೆಯಿದ್ದು, ಸಾರ್ವಜನಿಕರಿಗೆ ಹೊರೆ ಆಗುವುದಿಲ್ಲ ಎಂದು, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಸಮರ್ಥಿಸಿಕೊಂಡಿದ್ದಾರೆ.

ಹರ್ಷ/ಉಮೇಶ/ಮು.ಮಂ. ಎಕ್ಸ್ ಜಾಲತಾಣ ಖಾತೆ/ಪಿಟಿಸಿ ಬಾಗಲಕೋಟೆ

ಪ್ರದೇಶ ಸಮಾಚಾರ
18.06.2024
ತೈಲ ಬೆಲೆ/ಪ್ರತಿಭಟನೆ

ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಸಿರುವ, ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ, ರಾಜ್ಯಾದ್ಯಂತ ಬಿಜೆಪಿ ಪ್ರತಿಭಟನೆ ನಡೆಸಿತು.

ತೈಲ ದರಗಳ ಬೆಲೆ ಏರಿಕೆ ಖಂಡಿಸಿ, ವಿಧಾನ ಪರಿಷತ್ ಮಾಜಿ ಶಾಸಕ, ಬಿಜೆಪಿ ಹಿರಿಯ ಮುಖಂಡ ಎಂ.ಬಿ. ಭಾನುಪ್ರಕಾಶ್ ಶಿವಮೊಗ್ಗದಲ್ಲಿ ಪ್ರತಿಭಟನೆ ನಡೆಸಿದ್ದ ವೇಳೆ, ತೀವ್ರ ಹೃದಯಾಘಾತಕ್ಕೆ ಒಳಗಾದರು. ಆಸ್ಪತ್ರೆಗೆ ಸಾಗಿಸಿ, ತುರ್ತು ಚಿಕಿತ್ಸೆ ನೀಡಿದರೂ ಫಲಕಾರಿಯಾಗದೇ, ಅವರು ವಿಧಿವಶರಾದರು. ಅವರಿಗೆ 69 ವರ್ಷ ವಯಸ್ಸಾಗಿತ್ತು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ, ಸುದ್ದಿಗಾರರೊಂದಿಗೆ ಮಾತನಾಡಿದ, ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ್, ಬೆಲೆ ಏರಿಕೆ ಹಿಂಪಡೆಯುವ ವರೆಗೂ ಬಿಜೆಪಿ, ಪ್ರತಿಭಟನೆ ನಡೆಸಲಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಜನ ವಿರೋಧಿ ನೀತಿ ಅನುಸರಿಸಿ, ಬಡವರು ಹಾಗೂ ಮಧ್ಯಮ ವರ್ಗದ ಜನರನ್ನು, ಸಂಕಷ್ಟಕ್ಕೆ ದೂಡಿದ್ದಾರೆ ಎಂದು, ಸರ್ಕಾರವನ್ನು ಟೀಕಿಸಿದರು.

ರಾಜ್ಯದಲ್ಲಿ ಜನಸಾಮಾನ್ಯರ ಬದುಕಿಗೆ ಗ್ಯಾರಂಟಿ ಇಲ್ಲದಂತಾಗಿದೆ ಎಂದು, ದಕ್ಷಿಣ ಕನ್ನಡ ಸಂಸದ, ಕ್ಯಾಪ್ಟನ್ ಬ್ರಿಜೇಶ್ ಚೌಟ ಆರೋಪಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಕೊಡುವ ನೆಪದಲ್ಲಿ, ರಾಜ್ಯದ ಬಡವರ ಮೇಲೆ ತೆರಿಗೆ ಹಾಕಿ, ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡುವ ಮೂಲಕ, ರಾಜ್ಯದ ಜನತೆಗೆ ದ್ರೋಹ ಮಾಡುತ್ತಿದೆ ಎಂದು, ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ದೂರಿದ್ದಾರೆ.

ಚಿಕ್ಕಮಗಳೂರಿನಲ್ಲಿ ಪ್ರತಿಭಟನೆ ನಡೆಸಿದ, ವಿಧಾನ ಪರಿಷತ್ ಉಪ ಸಭಾಪತಿ ಎಂಕೆ. ಪ್ರಾಣೇಶ್, ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು, ತೈಲ ಬೆಲೆ ಏರಿಸಲಾಗಿದೆ ಎಂದು ಆರೋಪಿಸಿದರು.

ಹರ್ಷ/ಉಮೇಶ/ಜಿಲ್ಲಾವಾರು ಪಿಟಿಸಿಗಳು

ಪ್ರದೇಶ ಸಮಾಚಾರ
18.06.2024
ದ್ವಿ ಭಾಷೆ/ಶಾಲೆ

ಪ್ರಸಕ್ತ ಶೈಕ್ಷಣಿಕ ವರ್ಷದಿಂದ, ರಾಜ್ಯಾದ್ಯಂತ 75ಕ್ಕೂ ಹೆಚ್ಚು ಮಕ್ಕಳ ದಾಖಲಾತಿ ಇರುವ ಸಾವಿರದ ನಾಲ್ಕನೂರಾ 19 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ಪ್ರಸ್ತುತ ಕನ್ನಡ ಮಾಧ್ಯಮದ ಜೊತೆಗೆ, 1ನೇ ತರಗತಿಯಿಂದ, ಆಂಗ್ಲ ಮಾಧ್ಯಮದಲ್ಲಿ ತರಗತಿಗಳನ್ನು ಪ್ರಾರಂಭಿಸಲು, ಒಪ್ಪಿಗೆ ನೀಡಿ ಆದೇಶಿಸಿದೆ.

ದ್ವಿ ಭಾ ಾ ಮಾಧ್ಯಮ ಬೋಧನೆಗೆ ಆಯ್ಕೆಯಾಗಿರುವ ಶಾಲೆಗಳ ಪೈಕಿ, ಕಲಬುರಗಿ ಪ್ರಾದೇಶಿಕ ವಿಭಾಗದ 872, ಬೆಂಗಳೂರು ವಿಭಾಗದ 297, ಮೈಸೂರು ವಿಭಾಗದ 140 ಮತ್ತು ಧಾರವಾಡ ವಿಭಾಗದ 110 ಶಾಲೆಗಳು ಸೇರಿವೆ.

ಹರ್ಷ/ಉಮೇಶ/ಕ.ವಾ.ಇ.ಬೆಂ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರದೇಶ ಸಮಾಚಾರ
18.06.2024
ಯೋಗ/ಸಿದ್ಧತೆ

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಇಂದಿನಿಂದ 3 ದಿನಗಳ ರಾಷ್ಟ್ರೀಯ ಯೋಗ ಒಲಿಂಪಿಯಾಡ್ ನಡೆಯಲಿದೆ.

ದೇಶದ ವಿವಿಧ ಶಿಕ್ಷಣ ಸಂಸ್ಥೆಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಎನ್.ಸಿ.ಇ.ಆರ್.ಟಿ. ನಿರ್ದೇಶಕ ದಿನೇಶ್‌ಪ್ರಸಾದ್ ಸಕ್ಲಾನಿ ತಿಳಿಸಿದ್ದಾರೆ.

ಇಂದು ಬೆಳಗ್ಗೆ 11 ಗಂಟೆಗೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಯೋಗ ಒಲಿಂಪಿಯಾಡ್ ಉದ್ಘಾಟಿಸಲಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ, ವಿಶ್ವ ಯೋಗ ದಿನಾಚರಣೆ ಟ್ರಸ್ಟ್ ವತಿಯಿಂದ, ಜೂನ್ 21 ರಂದು, ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ 40 ನಿಮಿ ಗಳ ಕಾಲ ಶಿ ್ತಾಚಾರದಂತೆ ಯೋಗಾಸನಗಳನ್ನು ಹೇಳಿಕೊಡಲಾಗುವುದು ಎಂದು, ರಾಷ್ಟ್ರ ಮಟ್ಟದ ಯೋಗ ತೀರ್ಪುಗಾರ ಬಿ.ಜಿ.ಅಮರನಾಥ್, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಬಿ.ಜಿ.ಅಮರನಾಥ್ ಧ್ವನಿ 38 ಸೆಕೆಂದುಗಳು

<><><>

ಹರ್ಷ/ಉಮೇಶ/ಬೆಂ.ಗ್ರಾ.ಜಿ. ಪಿಟಿಸಿ

ಪ್ರದೇಶ ಸಮಾಚಾರ
18.06.2024
ದಿನೇಶ್/ಹೆಣ್ಣು ಭ್ರೂಣ

ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆಯ ವಿರುದ್ಧ, ಆರೋಗ್ಯ ಇಲಾಖೆ ನಿರ್ಣಾಯಕ ಸಮರ ಸಾರಿದೆ. ಜಾಗ್ರತ ದಳ ಸರ್ವ ಸನ್ನದ್ಧವಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆಯ ದಂಧೆಕೋರರು, ಎಲ್ಲೇ ಅಡಗಿದ್ದರೂ ಕಠಿಣ ಕಾನೂನು ಕ್ರಮ ನಿಶ್ಚಿತ ಎಂಬುದು, ಬೆಳಗಾವಿ ಜಿಲ್ಲೆ ಕಿತ್ತೂರು ಪ್ರಕರಣದಿಂದ ಸಾಬೀತಾಗಿದೆ. ವೈದ್ಯಕೀಯ ವೃತ್ತಿಯಲ್ಲಿ ತೊಡಗಿರುವವರೇ ಈ ಕಾನೂನು ಬಾಹಿರ ದಂಧೆಯಲ್ಲಿ ತೊಡಗಿರುವುದು ಆಘಾತಕಾರಿ. ವೈದ್ಯರ ಸಹಕಾರವಿಲ್ಲದೇ ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ನಡೆಯುವುದು ಅಸಾಧ್ಯ ಎಂದು ಅವರು, ಅಭಿಪ್ರಾಯಪಟ್ಟಿದ್ದಾರೆ.

ಹರ್ಷ/ಉಮೇಶ/ಕ.ವಾ.ಇ.ಬೆಂ./ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
18.06.2024
ಹೆರಿಗೆ/ಸುರಕ್ಷಿತ

ಸುರಕ್ಷಿತ ಹೆರಿಗೆಗಾಗಿ, ಬಾಗಲಕೋಟೆ ಜಿಲ್ಲೆಯ 41 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ದಿನದ 24 ಗಂಟೆ ವಾರದ ಏಳೂ ದಿನ ಕಾರ್ಯನಿರ್ವಹಿಸುವಂತೆ, ಮೇಲ್ದರ್ಜೆಗೇರಿಸಲಾಗಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಶಶಿಧರ ಕುರೇರ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 183 ಸ್ಕ್ಯಾನಿಂಗ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ನಡೆಯದಂತೆ, ಕಟ್ಟುನಿಟ್ಟಿನ ನಿಗಾವಹಿಸಲು ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ. ಮಹಾಲಿಂಗಪುರದ ಘಟನೆ ಮರುಕಳಿಸದಂತೆ ಜಾಗ್ರತವಾಗಿ ಕರ್ತವ್ಯ ನಿರ್ವಹಿಸುವಂತೆ, ಅವರು ನಿರ್ದೇಶಿಸಿದರು.

ಬದಾಮಿ ಮತ್ತು ಬೀಳಗಿ ತಾಲೂಕಿನ ಆರೋಗ್ಯ ಕೇಂದ್ರಗಳಲ್ಲಿ, ಒಂದೂ ಹೆರಿಗೆ ಆಗದಿರುವುದನ್ನು, ಗಂಭೀರವಾಗಿ ಪರಿಗಣಿಸಿದ್ದಾಗಿ, ಆಯಾ ತಾಲೂಕು ಆರೋಗ್ಯಾಧಿಕಾರಿಗಳಿಗೆ, ಶಶಿಧರ ಕುರೇರ್ ಎಚ್ಚರಿಕೆ ನೀಡಿದರು.

ಹರ್ಷ/ಉಮೇಶ/ಪಿಟಿಸಿ ಬಾಗಲಕೋಟೆ

ಪ್ರದೇಶ ಸಮಾಚಾರ
18.06.2024
ಹೆಣ್ಣು ಮಗು/ತನಿಖೆ

ಹೆಣ್ಣು ಹಸುಗೂಸನ್ನು ಕಾನೂನು ಬಾಹಿರವಾಗಿ, ಬೇರೆಯವರಿಗೆ ಹಸ್ತಾಂತರ ಮಾಡಿದ ಆರೋಪದಡಿ, ನಾಲ್ವರು ಆರೋಪಿಗಳ ವಿರುದ್ಧ, ಹಾವೇರಿ ಜಿಲ್ಲೆ, ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ, ಎಫ್.ಐ.ಆರ್. ದಾಖಲಾಗಿದೆ.

ಹೆಣ್ಣು ಮಗುವಿನ ಕಾನೂನು ಬಾಹಿರ ಹಸ್ತಾಂತರದ ಬಗ್ಗೆ, ಮಾಹಿತಿ ಸಂಗ್ರಹಿಸಲಾಗುತ್ತಿದೆ. ಪುರಾವೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುವುದಾಗಿ, ಜಿಲ್ಲಾ ಪೊಲೀಸ್ ವರಿ ೃಧಿಕಾರಿ ಅಂಶುಕುಮಾರ್ ತಿಳಿಸಿದ್ದಾರೆ.

ಕು–ಕೃತ್ಯಕ್ಕೆ ಸಂಬಂಧಿಸಿ, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಹರ್ಷ/ಉಮೇಶ/ಪಿಟಿಸಿ ಹಾವೇರಿ

ಪ್ರದೇಶ ಸಮಾಚಾರ
18.06.2024
ವಿ. ಸೋಮಣ್ಣ/ರೈಲ್ವೆ

ರೈಲ್ವೆ ಇಲಾಖೆಗೆ ಸಂಬಂಧಿಸಿದ, ಕಳೆದ 10 ವರ್ಷಗಳಿಂದ ಬಾಕಿ ಉಳಿದಿರುವ, 9 ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಂಡು, 2026ರ ಡಿಸೆಂಬರ್ ಒಳಗೆ ಪೂರ್ಣಗೊಳಿಸಲು, ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ ಎಂದು, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ರಾಜ್ಯದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಕುರಿತು, ಹುಬ್ಬಳ್ಳಿ, ಬೆಂಗಳೂರು, ಕಲಬುರಗಿ ಹಾಗೂ ಮೈಸೂರು ವಿಭಾಗೀಯ ಅಧಿಕಾರಿಗಳ ಜೊತೆ, ಸಚಿವರು ಬೆಂಗಳೂರಿನಲ್ಲಿ ಸಭೆ ನಡೆಸಿದರು.

ರೈಲ್ವೆಗೆ ಸಂಬಂಧಿಸಿದ, ರೈಲ್ವೆ ಲೈನ್ ಡಬ್ಲಿಂಗ್ ಯೋಜನೆಗಳು, ಲೆವೆಲ್ ಕ್ರಾಸಿಂಗ್, ಅಂಡರ್‌ಪಾಸ್, ಬ್ರಿಡ್ಜ್‌ಗೆ ಸಂಬಂಧಿಸಿದ ಕಾಮಗಾರಿಗಳನ್ನು, ತ್ವರಿತವಾಗಿ ಪೂರ್ಣಗೊಳಿಸುವ ವಿನೂತನ ಯೋಜನೆ ಇದಾಗಿದೆ ಎಂದು, ಸಚಿವ ಸೋಮಣ್ಣ ಹೇಳಿದರು.

ಹರ್ಷ/ಉಮೇಶ/ಡಿಡಿ ಚಂದನ/ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
18.06.2024
ಬಕ್ರೀದ್

ಪ್ರವಾದಿ, ಹಜರತ್ ಮೊಹಮ್ಮದ್ ಪೈಗಂಬರ್ ಅವರ, ತ್ಯಾಗ, ಬಲಿದಾನ, ಅಚಲ ದೈವಭಕ್ತಿ ಹಾಗೂ ಅವರ ಪುತ್ರ ಹಜರತ್ ಇಸ್ಮಾಯಿಲ್ ಅವರ, ದೈವಭಕ್ತಿಯನ್ನು ಸಂಕೇತಿಸುವ, ಬಕ್ರೀದ್ ಹಬ್ಬವನ್ನು, ರಾಜ್ಯಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿದ ವರದಿಗಳು ಬಂದಿವೆ.

ಅಹ್ಮದೀಯ ಪಂಚಾಂಗದ ಪ್ರಕಾರ, ಹನ್ನೆರಡನೇ ತಿಂಗಳು, ಧುಲ್ ಹಿಜ್ಜಾದ್, ಹತ್ತನೇ ದಿನದಂದು, ಮುಸ್ಲಿಂ ಬಾಂಧವರು, ಸಮಾಜದ ಒಳಿತಿಗಾಗಿ, ತ್ಯಾಗ ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು, ಆಚರಿಸಿದರು.

ಈದ್ಗಾ ಹಾಗೂ ಮಸೀದಿಗಳಲ್ಲಿ, ಸಾಮೂಹಿಕವಾಗಿ ವಿಶೇಷ ಪ್ರಾರ್ಥನೆ – ನಮಾಜ್ ಸಲ್ಲಿಸಿ, ಶುಭಾಶಯಗಳನ್ನು ವಿನಿಮಯಿಸಿಕೊಂಡರು.

ಬಂಧು ಮಿತ್ರರೊಡನೆ ವಿಶೇಷ ಭಕ್ಷ್ಯಗಳನ್ನು ಸವಿಯುವ, ಈದ್–ಉಲ್–ಅಧಾ ಜರುಗಿತು.

<><><>

ಶಾಂತಿ ಅನುಪಾಲನಾ ಸಮಿತಿಯ ಹಿಂದು ಮುಖಂಡರು, ಸಮಾಜದ ಗಣ್ಯರು, ಮುಸ್ಲಿಂ ಬಾಂಧವರಿಗೆ ಬಕ್ರೀದ್ ಹಬ್ಬದ ಪ್ರಯುಕ್ತ, ಸೌಹಾರ್ದ ಶುಭಾಶಯ ಕೋರಿದರು.

<><><>

ಬಕ್ರೀದ್ ಹಬ್ಬದ ಹಿನ್ನೆಲೆ, ಮೈಸೂರಿನ ಶ್ರೀ ಚಾಲರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆ ಪ್ರಕೃತಿ ಉದ್ಯಾನ ಇಂದು, ಸಾರ್ವಜನಿಕರ ವೀಕ್ಷಣೆಗೆ ತೆರೆದಿರಲಿದೆ ಎಂದು, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು, ತಿಳಿಸಿದ್ದಾರೆ.

ಹರ್ಷ/ಉಮೇಶ/ಜಿಲ್ಲಾವಾರು ಪಿಟಿಸಿ

ಪ್ರದೇಶ ಸಮಾಚಾರ
18.06.2024
ಮಳೆ/ಮುನ್ಸೂಚನೆ

ದಕ್ಷಿಣಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ, ಮುಂದಿನ 24 ಗಂಟೆಗಳಲ್ಲಿ, ಗುಡುಗು ಸಹಿತ ಭಾರೀ ಮಳೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಸೋಮವಾರ ಉತ್ತಮ ಮಳೆ ಸುರಿದಿದೆ. ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಗೋಣಿಕೊಪ್ಪದಲ್ಲಿ ಸಾಧಾರಣ ಮಳೆಯಾಗಿದೆ.

ಹರ್ಷ/ಉಮೇಶ/ಐಎಂಡಿ ಎಕ್ಸ್ ಜಾಲತಾಣ

ಪ್ರದೇಶ ಸಮಾಚಾರ
18.06.2024
ವಿಮೆನ್ಸ್/ಕ್ರಿಕೆಟ್

ಅಲ್ಪ ಮೊತ್ತ ಗಳಿಸಿದರೂ ಎದುರಾಳಿ ತಂಡವನ್ನು ನಿಯಂತ್ರಿಸಿದ ವಿಜಯಪುರ ವಿಮೆನ್ಸ್ ಕ್ರಿಕೆಟ್ ಕ್ಲಬ್ ತಂಡ, ಹುಬ್ಬಳ್ಳಿ ವಿಮೆನ್ಸ್ ಕ್ರಿಕೆಟ್ ಅಕಾದೆಮಿ, ಹುಬ್ಬಳ್ಳಿಯ ಬಿ.ಜಿ.ಮೈದಾನದಲ್ಲಿ ಆಯೋಜಿಸಿದ್ದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಎಸ್.ಎಂ.ಎಸ್. ಟೈಗರ್ಸ್, ಉಡುಪಿ ತಂಡದ ಎದುರು 5 ರನ್‌ಗಳಿಂದ ಜಯ ಗಳಿಸಿತು.

ಹರ್ಷ/ಉಮೇಶ/ಅಕಾದೆಮಿ ಪ್ರ.

ಈಗ ಸಂಕ್ಷಿಪ್ತ ಸುದ್ದಿಗಳು:

ಪೋಕ್ಸೊ ಪ್ರಕರಣದ ಒಂದರಲ್ಲಿ ಹೈಕೋರ್ಟ್ ಸೂಚನೆ ಮೇರೆಗೆ, ಸೋಮವಾರ ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಸಿಐಡಿ ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆಯನ್ನು ದಾಖಲಿಸಿದರು.

ರಾಯಚೂರಿನಲ್ಲಿ ಆಯೋಜಿಸಲಾಗಿದ್ದ, ಗಮಕ ಕಾವ್ಯ ವಾಚನ ವ್ಯಾಖ್ಯಾನ ಕಾರ್ಯಕ್ರಮಕ್ಕೆ, ಪರಿ ‘ತ್ ರಾಜ್ಯಾಧ್ಯಕ್ಷ ಡಾಕ್ಟರ್ ಎ.ವಿ.ಪ್ರಸನ್ನ ಚಾಲನೆ ನೀಡಿದರು.

2024ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಗೈದ ವಿದ್ಯಾರ್ಥಿಗಳಿಗೆ, ಉತ್ತರಪ್ರದೇಶ ರಾಜ್ಯಪಾಲರಾದ, ಆನಂದಿಬೆನ್ ಪಟೇಲ್, ಜೈನ್ ಕಾಲೇಜಿನಲ್ಲಿ ಪ್ರಮಾಣಪತ್ರ, ಸ್ವರ್ಣಪದಕ ನೀಡಿ, ಗೌರವಿಸಿದರು.

ದಕ್ಷಿಣ ಭಾರತ ಉತ್ಸವದ ಮೂಲಕ, ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ, ನಾಲ್ಕು ಸಾವಿರದ ಇನ್ನೂರು ಕೋಟಿ ರೂಪಾಯಿ, ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆಯಾಗಿದೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ ಪಾಟೀಲ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

ರಾಜ್ಯದ ಪ್ರವಾಸಿ ತಾಣಗಳು ಹಾಗೂ ಚಿಕ್ಕಬಳ್ಳಾಪುರದ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ಅರಣ್ಯ ವಲಯದ, ಬೀಚಗಾನಹಳ್ಳಿ, ಮಿಟ್ಟೇಮರಿ ಅರಣ್ಯ ಪ್ರದೇಶದಲ್ಲಿ, ಆರು ಕಾಡು ಹಂದಿಗಳನ್ನು ಸಾಗಿಸುತ್ತಿದ್ದ, ಇಬ್ಬರು ಆರೋಪಿಗಳನ್ನು ಅರಣ್ಯಾಧಿಕಾರಿ ಬಂಧಿಸಿ, ವನ್ಯಪ್ರಾಣಿಗಳನ್ನು ರಕ್ಷಿಸಿದ್ದಾರೆ.

ರೈತರ ಪಹಣಿಗೆ ಆಧಾರ್ ಜೋಡಿಸುವಲ್ಲಿ, ದಾವಣಗೆರೆ ಜಿಲ್ಲೆ ರಾಜ್ಯ ಮಟ್ಟದಲ್ಲಿ ಮೂರನೇ ಸ್ಥಾನ ಪಡೆದಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

'ಕುಡಿಯುವ ನೀರು ಗುಣಮಟ್ಟ ಪರೀಕ್ಷಿಸುವ, ತರಬೇತಿ ಕಾರ್ಯಾಗಾರ'ಕ್ಕೆ, ಉತ್ತರಕನ್ನಡ ಜಿಲ್ಲೆ ಕಾರವಾರದಲ್ಲಿ, ಶಾಸಕ ಸತೀಶ್ ಸೈಲ್ ಚಾಲನೆ ನೀಡಿದರು.

ಕೊಡಗು ಜಿಲ್ಲೆಯ ಹೋಂ ಸ್ಟೇಗಳಿಗೆ, ವಾಣಿಜ್ಯ ಬಳಕೆಯ ವಿದ್ಯುತ್ ಶುಲ್ಕ ವಿಧಿಸದೇ, ಗೃಹ ಬಳಕೆ ಶುಲ್ಕ ನಿಗದಿ ಪಡಿಸುವ ಕುರಿತು, ಪ್ರವಾಸೋದ್ಯಮ ಖಾತೆ ಸಚಿವರ ಜೊತೆ ಚರ್ಚಿಸುವುದಾಗಿ, ಮಡಿಕೇರಿ ಶಾಸಕ ಮಂತರ್ ಗೌಡ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿ, ಮೇವು ಬೆಳೆಸಲು, ಒಂದು ಎಕರೆಗೆ 20 ಸಾವಿರ ರೂಪಾಯಿ ಸಹಾಯ ಧನ, ಮೇವಿನ ಬೀಜ ಮತ್ತು ಉಪಕರಣ ನೀಡಲಿದೆ ಎಂದು, ಕೋಲಾರ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಿವಕುಮಾರ್ ತಿಳಿಸಿದ್ದಾರೆ.

ವಿಜಯಪುರದಿಂದ, ಮಮ್ಮುಟ್ಟಿಗುಡ್ಡದ ಅಮೋಘಸಿದ್ದೇಶ್ವರ ದೇವಸ್ಥಾನಕ್ಕೆ, ನೂತನ ಸಂಚಾರ ಹೊಸದಾಗಿ ಆರಂಭಿಸಲಾಗಿದೆ. ಪ್ರತಿ ದಿನ ಬೆಳಗ್ಗೆ 8, ಮಧ್ಯಾಹ್ನ 1 ಹಾಗೂ ಸಂಜೆ 5 ಗಂಟೆಗೆ, ಬಸ್ ಹೊರಡಲಿದೆ.

ಹರ್ಷ/ಉಮೇಶ/ಕ.ವಾ.ಇ.ಬೆಂ./ಜಿಲ್ಲಾವಾರು ಪಿಟಿಸಿ/ಕ.ವಾ.ಇ.

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಪೆಟ್ರೋಲ್, ಡಿಸೇಲ್ ದರ ಏರಿಕೆ, ಅನಿವಾರ್ಯ – ಮುಖ್ಯಮಂತ್ರಿ ಸಮರ್ಥನೆ; ತೈಲ ದರ ಇಳಿಕೆಗೆ ಆಗ್ರಹಿಸಿ ಬಿಜೆಪಿಯಿಂದ, ರಾಜ್ಯಾದ್ಯಂತ ಪ್ರತಿಭಟನೆ.
- ಪ್ರಸಕ್ತ ಶೈಕ್ಷಣಿಕ ವರ್ಷದಿಂದ, ಸಾವಿರದ ನಾಲ್ಕನೂರಾ 19 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ದ್ವಿ ಭಾಷಾ ಬೋಧನೆಗೆ, ಒತ್ತು.
- ವೈದ್ಯಕೀಯ ವೃತ್ತಿ ನಿರತರೇ, ಹೆಣ್ಣು ಭ್ರೂಣ ಹತ್ಯೆಯಲ್ಲಿ ತೊಡಗಿರುವುದು, ಆಘಾತಕಾರಿ – ದಿನೇಶ ಗುಂಡೂರಾವ್, ಕಳವಳ.

ರೈಲ್ವೆ ಇಲಾಖೆಯ, ರಾಜ್ಯದ ನಾಲ್ಕು ವಿಭಾಗಗಳ, ಒಂಬತ್ತು ಪ್ರಮುಖ ಯೋಜನೆಗಳು, ಶೀಘ್ರ ಜಾರಿಗೆ – ಕೇಂದ್ರ ಸಚಿವ ವಿ.ಸೋಮಣ್ಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ

## ADDITIONAL NEWS PIECES -

ಪ್ರದೇಶ ಸಮಾಚಾರ
18.06.2024
ಯೋಗ/ಪೂರ್ವಭಾವಿ ಸಭೆ

ಉತ್ತರಕನ್ನಡ ಜಿಲ್ಲೆಯಲ್ಲಿ ಯೋಗ ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಯನ್ನು, ಮೌಲ್ಯವರ್ಧಿಸಿ ಬಳಸಿಕೊಳ್ಳಲು ವಿಫುಲ ಅವಕಾಶಗಳಿದ್ದು, ಸದ್ಬಳಕೆಗೆ ಯೋಜಿತ ಪ್ರಯತ್ನ ಕೈಗೊಳ್ಳಲಾಗುವುದು ಎಂದು, ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ, ವಿಶ್ವ ಯೋಗ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ, ಕಾರವಾರದ ಕಾಜು ಬಾಗ್ ಪೊಲೀಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ, ಎಂದರು.

ಹರ್ಷ/ಉಮೇಶ/ಕಾರವಾರ ಪಿಟಿಸಿ

ಪ್ರದೇಶ ಸಮಾಚಾರ
18.06.2024
ಘಟಿಕೋತ್ಸವ

ಬೆಂಗಳೂರಿನ, ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ, ಮೊದಲ ವಾರ್ಷಿಕ ಘಟಿಕೋತ್ಸವ, ನಾಳೆ ಬುಧವಾರ 19ರಂದು, ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜರುಗಲಿದೆ.

ಕುಲಾಧಿಪತಿ ಹಾಗೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ಒಟ್ಟು 4 ಚಿನ್ನದ ಪದಕ, 12 ಪ್ರಮಾಣಪತ್ರ ಮತ್ತು 180 ಪದವಿಗಳನ್ನು ಪ್ರದಾನ ಮಾಡಲಿದ್ದಾರೆ.

ಸಹ ಕುಲಾಧಿಪತಿ ಡಾಕ್ಟರ್ ಎಂ.ಸಿ.ಸುಧಾಕರ್, ಆರ್.ಬಿ.ಐ.ನ ಮಾಜಿ ಗವರ್ನರ್ ಡಾಕ್ಟರ್ ಸಿ.ರಂಗರಾಜನ್, ಉಪ ಕುಲಪತಿ ಡಾಕ್ಟರ್ ಎನ್.ಆರ್.ಭಾನುಮೂರ್ತಿ ಪಾಲ್ಗೊಳ್ಳಲಿದ್ದಾರೆ.

ಹರ್ಷ/ಉಮೇಶ/ಕ.ವಾ.ಇ.ಬೆಂ/ವಿವಿ.ಕು.ಸ.ಪ್ರ

ಪ್ರದೇಶ ಸಮಾಚಾರ
18.06.2024
ಮನ್ ಕಿ ಬಾತ್

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್'ನ 111 ನೇ ಸಂಚಿಕೆಯಲ್ಲಿ, ದೇಶ, ವಿದೇಶಗಳ ಜನತೆಯೊಂದಿಗೆ, ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ.

ಭಾನುವಾರ, 30ನೇ ತಾರೀಖು ಪ್ರಸಾರವಾಗಲಿರುವ, ಮನದ ಮಾತಿಗೆ, ಟೋಲ್ ಫ್ರೀ ಸಂಖ್ಯೆ 1800–11–70800, ನಮೋ ಆ್ಯಪ್ ಅಥವಾ ಮೈ ಜಿ.ಒ.ವಿ ಡಾಟ್ ಇನ್ ಮೂಲಕ, ಇದೇ 28ರ ವರೆಗೆ ಜನತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು.

ಹರ್ಷ/ಉಮೇಶ/ಪಿಐಬಿ/ನ್ಯೂಸ್ ಆನ್ ಏರ್

*EOM*